ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ-೧೬೧ Volume-161	ಬೆಂಗಳೂರು, ಬುಧವಾರ, ೦೩, ಜೂನ್, ೨೦೨೬ (ಜ್ಯೇಷ್ಠ, ೧೩, ಶಕವರ್ಷ, ೧೯೪೮) BENGALURU, WEDNESDAY, 03, JUNE, 2026 (JYAISTHA , 13, SHAKAVARSHA, 1948)	ಸಂಚಿಕೆ- ೧೦೫ Issue – 105

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನಮೂನೆ-V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು

ಕರ್ನಾಟಕ ತಿದ್ದುಪಡಿ ನಿಯಮ-5, 20(1) ಬಿ)

ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ,ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾಯ್ದೆ-2013 ಕಲಂ-11(1) ರೆ ಮೇರೆಗೆ ಅಧಿಸೂಚನೆ.

ಸಂಖ್ಯೆ:- ಕಗೃಮಂ/ ಭೂಸ್ವಾಪಿ/ಶಿವಮೊಗ್ಗ/ಹಾಗಲಮನೆ/2025-26/261973 ದಿನಾಂಕ:- 02-04-2026

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕು, ಕಸಬಾ-II ಹೋಬಳಿ, ಹಾಗಲಮನೆ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30) ಕ್ಕೆ ಅನುಗುಣವಾಗಿ

ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:- 23-07.2019 ರಿಂದ ಜಾರಿಗೆ ಬಂದಿರುವ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (2019 ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ರ ಕಲಂ-10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ:- ಕಂಇ 01 ಎಕ್ಯೂಎಸ್ 2026 ದಿ:-21-02-2026 ರಲ್ಲಿ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 24-02-2026 ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30)ರ ಕಲಂ 12 ರಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ,ಸೂಕ್ತ ಪರಿಹಾರದ ಹಕ್ಕು ,ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮದ ಸಂಖ್ಯೆ 30) ರ ಕಲಂ-11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ,ಬೋಗ್ಯಕ್ಕೆ ಅಡವಿಡುವ, ,ಅನುಭವಿಸುವ ,ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಭಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂ ಸ್ವಾಧೀನಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ,ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ನಿರ್ಮಾಣ ಕಾಯ್ದೆ-2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30) ರ ಕಲಂ 15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂ ಸ್ವಾಧೀಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ-1, ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರೀಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ:-ಶಿವಮೊಗ್ಗ ತಾಲ್ಲೂಕು:-ಭದ್ರಾವತಿ ಹೋಬಳಿ:-ಕಸಬಾ-II ಗ್ರಾಮ:- ಹಾಗಲಮನೆ

ಕ್ರ ಸಂ	ಪಹಣಿಯಂತೆ ಖಾತೆದಾರರ ಹೆಸರು		ಸರ್ವೆ / ಖಾತಾ ನಂಬರ್	ಸರ್ವೆ ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ / ಸರಹದ್ದು				ಷರಾ
	ಭೂಮಾಲೀಕರು/ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ/ ಕೃಷಿಯೇತರ ಜಮೀನು (ಎ-ಗು)	ಖರಾಬು (ಎ-ಗು)	ಕೃಷಿ/ಕೃಷಿಯೇತರ ಜಮೀನು	ಖರಾಬು (ಎ-ಗು)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1	ಎ. ಆರ್. ಕಲ್ಪನಾ ಅಶೋಕ್ ಕೋಂ ಲೇ// ಬಿ. ಕೆ. ಅಶೋಕ್	ಎ. ಆರ್. ಕಲ್ಪನಾ ಅಶೋಕ್ ಕೋಂ ಲೇ// ಬಿ. ಕೆ. ಅಶೋಕ್	40	6-11	0-12	6-11	0-12	ತರಿ	ಸ ನಂ 57/2 57/3	ಸ ನಂ 43/2 42, 41	ಸ ನಂ 52, 57/2	ಸ ನಂ 36, 39	
2	ಎ. ಆರ್. ಕಲ್ಪನಾ ಅಶೋಕ್ ಕೋಂ ಲೇ// ಬಿ. ಕೆ. ಅಶೋಕ್	ಎ. ಆರ್. ಕಲ್ಪನಾ ಅಶೋಕ್ ಕೋಂ ಲೇ// ಬಿ. ಕೆ. ಅಶೋಕ್	41	10-21	0-00	10-21	0-00	ಖುಷ್ಕಿ	ಸ ನಂ 40	ಸ ನಂ 36	ಸ ನಂ. 36 43/1, 42	ಸ ನಂ 36	
3	ಎ.ಆರ್. ಕಲ್ಪನಾ ಅಶೋಕ್ ಕೋಂ ಲೇ// ಬಿ. ಕೆ. ಅಶೋಕ್	ಎ.ಆರ್. ಕಲ್ಪನಾ ಅಶೋಕ್ ಕೋಂ ಲೇ// ಬಿ. ಕೆ. ಅಶೋಕ್	42	5-00	0-07	5-00	0-07	ತರಿ	ಸ ನಂ 40	ಸ ನಂ 41	ಸ ನಂ 43/1, 43/2	ಸ ನಂ 41	
ಒಟ್ಟು						**21-32**	**0-19**						

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಘೋಷ್ವಾರೆ

ಗ್ರಾಮ	ವಿಸ್ತೀರ್ಣ ಎ-ಗು		ಖರಾಬು ಎ-ಗು		ಒಟ್ಟು ವಿಸ್ತೀರ್ಣ ಎ-ಗು	
ಹಾಗಲಮನೆ	**21**	**32**	**0**	**19**	**22**	**11**

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್ ನಂಬರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ
ಬೆಂಗಳೂರು

PD-59

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–೫೬೯.

THAMMAIAH